
# ಸ್ಫೂರ್ತಿ ದೇವತೆ ಒಡಹುಟ್ಟದ ಈ ಅಕ್ಕ!

ನಾನಾಗ ಮನೆಯಿಂದ ದೂರ, ಮಡಿಕೇರಿಯ ಕುಶಾಲನಗರದ ಪಾಲಿಟೆಕ್ನಿಕ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೆ. ಸಹಪಾಠಿಯೊಂದಿಗೆ ಬಾಡಿಗೆ ಕೋಣೆಯಲ್ಲಿ ಸ್ವಯಂಪಾಕ ಮಾಡಿಕೊಂಡು ಓದುತ್ತಿದ್ದೆ. ದಿನಾ ಬೆಳಿಗ್ಗೆ ಹಾಲು ತರಲು ಹೋಗುತ್ತಿದ್ದ ಮನೆಯ ಪಕ್ಕದಲ್ಲಿ ಮಂಗಳೂರಿನ ಯುವತಿಯೊಬ್ಬರು ತಮ್ಮ ಹೆತ್ತವರ ಜೊತೆಗಿದ್ದರು. ನಮ್ಮೂರಿನವರೇ ಆದ ಕಾರಣ ಪರಿಚಯವಾಗಿ ನನಗೆ ತುಂಬಾ ಆಪ್ತರಾದರು. ಬ್ಯಾಂಕೊಂದರಲ್ಲಿ ಉದ್ಯೋಗಿಯಾಗಿದ್ದ ಅವರು ನನ್ನನ್ನು ಸ್ವಂತ ತಮ್ಮನ ಹಾಗೆ ನೋಡಿಕೊಂಡರು. ನನಗೂ ಒಡಹುಟ್ಟಿದ ಅಕ್ಕನಿಲ್ಲದ್ದರಿಂದ ಅವರೇ ಅಕ್ಕನಾದರು!

ನಾನು ಚೆನ್ನಾಗಿ ಓದಬೇಕೆಂದೂ, ಕೆಟ್ಟವರ ಸಹವಾಸ ಮಾಡಬಾರದೆಂದೂ, ಕುಡಿತ, ಸಿಗರೇಟುಗಳಂತಹ ಕೆಟ್ಟ ಅಭ್ಯಾಸ ಮಾಡಬಾರದೆಂದೂ ವಾತ್ಸಲ್ಯದಿಂದ ಬುದ್ಧಿ ಹೇಳಿ ತಿದ್ದಿ, ಸದಾ ಬೆಂಗಾವಲಾಗಿ ನಿಲ್ಲುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ಮನೆಗೆ ಆಹ್ವಾನಿಸಿ ಎಣ್ಣೆ ಸ್ನಾನ ಮಾಡಿಸಿ ಹಬ್ಬದೂಟ ಬಡಿಸುತ್ತಿದ್ದರು. ಪರೀಕ್ಷೆಗಳಲ್ಲಿ ಒಳ್ಳೆಯ ಅಂಕಗಳನ್ನು ಗಳಿಸಿದಾಗೆಲ್ಲಾ ಹೊಸ ಪ್ಯಾಂಟ್, ಶರ್ಟ್ ಖರೀದಿಸಿ ಕೊಟ್ಟು ಇನ್ನಷ್ಟು ಚೆನ್ನಾಗಿ ಓದುವಂತೆ ಪ್ರೋತ್ಸಾಹಿಸುತ್ತಿದ್ದರು. ಒಟ್ಟಾರೆ ನಾನಲ್ಲಿ ಓದುತ್ತಿದ್ದ ಮೂರು ವರ್ಷಗಳಲ್ಲಿ ಹೆತ್ತವರಿಂದ ದೂರವಿದ್ದರೂ ಆ ನೋವು ಕಾಡದಂತೆ ನೋಡಿಕೊಂಡಿದ್ದರು ಆ ಸುಧಾಕ್ಕ.

ಒಡಹುಟ್ಟದಿದ್ದರೂ ಅದಕ್ಕಿಂತ ಒಂದು ಕೈ ಮೇಲೇ ಎಂಬಂತೆ ನನ್ನ ಬೆನ್ನೆಲುಬಾಗಿ ವಿದ್ಯಾರ್ಥಿ ಜೀವನಕ್ಕೆ ಜೊತೆ ನೀಡಿದ್ದರು. ಅದರ ಫಲವೋ ಎಂಬಂತೆ ಅಂತಿಮ ವರ್ಷದ ಮೆಕ್ಯಾನಿಕಲ್ ಎಂಜಿನಿಯರಿಂಗ್ ಡಿಪ್ಲೊಮಾ ಪರೀಕ್ಷೆಯಲ್ಲಿ ನಾನು ಕಾಲೇಜಿಗೇ ಪ್ರಥಮ ಸ್ಥಾನ ಪಡೆದು ತೇರ್ಗಡೆ ಹೊಂದಿದ್ದೆ. ಬಳಿಕ ಬಿ.ಇ.ಗೆ ಪ್ರವೇಶ ದೊರಕಲೂ ಇದು ಸಹಕಾರಿಯಾಯಿತು. ಬೆಂಗಳೂರಿನಲ್ಲಿ ಉದ್ಯೋಗ ನಿರ್ವಹಿಸುತ್ತಿರುವಾಗಲೂ ಪತ್ರ ಮುಖೇನ ಬುದ್ಧಿವಾದ ಹೇಳುತ್ತಿದ್ದರು. ನಂತರ ಅವರು ವಿವಾಹವಾಗಿ ಮುಂಬೈ ಸೇರಿದರು. ನಾನೂ ಉನ್ನತ ಉದ್ಯೋಗ ಹೊಂದಿ ಮುಂಬೈಯಲ್ಲೇ ನಿವೃತ್ತಿ ಹೊಂದಿದ್ದು, ಇಂದಿಗೂ ಅವರ ಪ್ರೀತಿಯ ತಮ್ಮನಾಗಿರುವೆ. ನನ್ನ ಬಾಳ ಏಳ್ಗೆಗೆ ಕಾರಣರಾದ ಅವರೇ ನನ್ನ ಸ್ಫೂರ್ತಿ ದೇವತೆಯಾಗಿದ್ದಾರೆ.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ



# ನನ್ನ ಧೈರ್ಯ ಸ್ಥೈರ್ಯ...

ನನ್ನಲ್ಲಿ ಜೀವನಪ್ರೀತಿಯನ್ನು ಕಲಿಸಿದವರು ನನ್ನ ತಾಯಿ. ಚಿಕ್ಕಬಳ್ಳಾಪುರದಿಂದ ಶಿವಮೊಗ್ಗ ಜಿಲ್ಲೆಯ, ತೀರಾ ಒಳಭಾಗದಲ್ಲಿರುವ ಕಪ್ಪನಹಳ್ಳಿಗೆ ಅವರನ್ನು ಮದುವೆ ಮಾಡಿಕೊಟ್ಟಿದ್ದರು. ಅವರು ಬೇಸರಿಸದೆ, ಅಲ್ಲಿನ ರೈತಾಪಿ ವಾತಾವರಣ ಹಾಗೂ ಮಲೆನಾಡಿನ ರೀತಿ ರಿವಾಜುಗಳಿಗೆ ಸಕಾರಾತ್ಮಕವಾಗಿ ಹೊಂದಿಕೊಂಡರು.

ತಾವು ಕಲಿತ ಎಂಬ್ರಾಯಿಡರಿ, ನಾನಾ ರೀತಿಯ ಹೊಲಿಗೆ ಕಸೂತಿಗಳನ್ನು ಬೇರೆಯವರಿಗೂ ಕಲಿಸಿದರು. ‘ಅಕ್ಕಮಹಾದೇವಿ ಮಹಿಳಾ ಸಂಘ’ವನ್ನು ಸ್ಥಾಪಿಸಿದರು. ಹೆಣ್ಣುಮಕ್ಕಳಿಗೆ ಬಟ್ಟೆ ಹೊಲಿಯುವ ತರಬೇತಿ ಕೊಡಿಸಿದರು. ಕೆಲವು ಸಲ ಬೇರೆ ಊರಿನ ಹೆಣ್ಣುಮಕ್ಕಳಿಗೆ ನಮ್ಮ ಮನೆಯಲ್ಲಿಯೇ ಇರಲು ಅವಕಾಶವನ್ನು ಕೊಟ್ಟಿದ್ದರು. ನಾವಿರುವ ಪರಿಸರಕ್ಕೆ ಹೊಂದಿಕೊಂಡು ಅಭಿವೃದ್ಧಿಯ ಮಾರ್ಗದಲ್ಲಿ ಹೇಗೆ ನಡೆಯಬಹುದೆಂಬ ಪಾಠ ಕಲಿಸಿದರು. ಕೆಲಸ ಮಾಡುವವರನ್ನು ಪ್ರೀತಿಯಿಂದ ಕಾಣುತ್ತಿದ್ದರು. ಹೆಂಗಸರು ತಮ್ಮ ಸಣ್ಣ ಮಕ್ಕಳನ್ನು ಗುಡಿಸಲುಗಳಲ್ಲಿ ಬಿಟ್ಟು ಗದ್ದೆಗಳಿಗೆ ಹೋದರೆ, ಅವರನ್ನು ನೋಡಿಕೊಳ್ಳುತ್ತಿದ್ದರು. ಆ ಮಹಿಳೆಯರಿಗೆ ಮುಟ್ಟಿನ ತೊಂದರೆಗಳಾದಾಗ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು.

ನನ್ನ ಅಮ್ಮ ಬದುಕಿದ ರೀತಿಯೇ ನನ್ನ ಜೀವನಕ್ಕೆ ಧೈರ್ಯ, ಸ್ಥೈರ್ಯವಾಗಿದೆ. ವಿದ್ಯಾಭ್ಯಾಸಕ್ಕೆ ಹೆಚ್ಚು ಪ್ರಾಮುಖ್ಯ ಕೊಟ್ಟು ನಮ್ಮನ್ನು ಚಿಕ್ಕ ವಯಸ್ಸಿನಲ್ಲಿಯೇ ಬೇರೆ ಊರುಗಳಲ್ಲಿ ಬಿಟ್ಟು ಓದಿಸಿದ್ದರು. ಹತ್ತನೇ ತರಗತಿಯ ನಮ್ಮ ಬ್ಯಾಚಿನಲ್ಲಿ ನಾನೊಬ್ಬಳೇ ಕಾಲೇಜಿಗೆ ಹೋಗಿ ಕಲಿತದ್ದು. ಇದು ನನ್ನ ಮುಂದಿನ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿತು. ವಾರಪತ್ರಿಕೆ, ದಿನಪತ್ರಿಕೆಗಳನ್ನು ಮನೆಗೆ ತರಿಸುತ್ತಿದ್ದರು. ಆಗಿನ ಕಾಲದಲ್ಲಿ ಅದು ಸುಲಭವಾಗಿರಲಿಲ್ಲ. ಇದರಿಂದ ನಮಗೂ ಓದುವ ಹವ್ಯಾಸ ಬೆಳೆಯಿತು.

ಮನೆಯ ವಾತಾವರಣದಲ್ಲಿ ಉತ್ತಮತೆಯನ್ನು, ಉದಾತ್ತ ಚಿಂತನೆಗಳನ್ನು ತುಂಬಿದರು. ತಪ್ಪನ್ನು ಸ್ಪಷ್ಟವಾಗಿ ತಿಳಿಹೇಳುತ್ತಿದ್ದರು. ಎಲ್ಲರನ್ನೂ ಸಮಾನತೆ, ಗೌರವದಿಂದ ಮಾತಾಡಿಸುತ್ತಿದ್ದರು. ಗಿಡ ಮರ ಚಿಗುರು ಹೂವುಗಳನ್ನು ನೋಡಿ ಸಂತೋಷಪಡುವುದು, ಕಷ್ಟ ಸುಖಗಳಲ್ಲಿ ದ್ವೇಷ ಸಾಧಿಸದೆ ಭಾಗಿಯಾಗುವುದು... ಇಂತಹ ಶಿಕ್ಷಣವನ್ನು ನೀಡಿದ್ದರಿಂದಲೇ ನಾನೂ ಅದೇ ಹಾದಿಯಲ್ಲಿ ಸಾಗಿದ್ದೇನೆ. ನನ್ನ ತಾಯಿ ಇಂದಿಗೂ ನನ್ನೆದೆಯಲ್ಲಿ ಸತ್ಯವನ್ನೇ ಹೊತ್ತಿಸುತ್ತಿದ್ದಾರೆ.

–ನಿರ್ಮಲ, ಚಿತ್ರದುರ್ಗ

## ಕನ್ನಡದ ಕವಿತೆಯ ಸಾಲು...

ಮಾತು ಮಾತಿಗೆ, ಕಡು ಕಷ್ಟದ ಸಮಯದಲ್ಲಿ ಮನೋಸ್ಥೈರ್ಯ ತುಂಬಲು ಅಥವಾ ಇನ್ನೊಬ್ಬರಿಗೆ ಸಾಂತ್ವನ ಹೇಳುವಾಗ, ಖುಷಿಯಾದಾಗ, ಆತಂಕ, ಒತ್ತಡದಲ್ಲಿದ್ದಾಗ ಸಂತೈಸಬಹುದಾದ ಕನ್ನಡದ ಕವಿತೆಯ ಸಾಲು ಯಾವುದು? ಯಾವ ಸಂದರ್ಭದಲ್ಲೆಲ್ಲ ಆ ಸಾಲು ನಿಮ್ಮನ್ನು ಸಮಾಧಾನದ ಕಡೆಗೆ ಕೈ ಹಿಡಿದು ಕರೆದೊಯ್ದಿದೆ? ನಮ್ಮೊಂದಿಗೆ ಹಂಚಿಕೊಳ್ಳಿ. ನಿಮ್ಮ ನೆಚ್ಚಿನ ಸಾಲು, ಉಳಿದವರ ಮನದೊಳಗೂ ಸಮಾಧಾನದ ಕುಡಿ ಹೊತ್ತಿಸಬಹುದು. ಬರಹ 150ರ ಪದಮಿತಿಯಲ್ಲಿರಲಿ. ಕೊನೆಯ ದಿನಾಂಕ ನವೆಂಬರ್ 30. ಲೇಖನವನ್ನು ನುಡಿ ಅಥವಾ ಯುನಿಕೋಡ್‌ನಲ್ಲಿ editorsu@sudha.co.inಗೆ ಮೇಲ್ ಮಾಡಿ.